ಶ್ರೀ ಬಿ. ಆರ್. ನೀಲಕಂಠಪ್ಪ.—ನಾನು ಒಂದು ವಿಷಯವನ್ನು ಹೇಳುತ್ತೇನೆ. ಈ ವಿಷಯದ ಬಗ್ಗೆ ನಾನು ಹಿಂದಿನ ಸದನದಲ್ಲೇ ಸಿಸಿಳರ ಕೆಳಗೆ ಪ್ರಸ್ತಾಪ ಮಾಡಿದ್ದೆ. ಆದರೂ.....

ಅಧ್ಯಕ್ಷರು.—ತಾವು ಓದಿ ಸ್ವಾಮಿ. ಇಲ್ಲದಿದ್ದರೆ ಮುಂದಿನವರ ಹೆಸರನ್ನು ನಾನು ಕರೆಯುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ನನ್ನದೊಂದು ಸಣ್ಣ ಕ್ಲಾರಿಫಿಕೇಷನ್.....

ಅಧ್ಯಕ್ಷರು.—ತಾವು ಓದಿ ಹೇಳುತ್ತೀರೋ ಇಲ್ಲವೋ ?

ಶ್ರೀ ಬಿ. ಆರ್. ನೀಲಕಂಠಪ್ಪ.—ಸಣ್ಣ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಹಿಂದಿನದಕ್ಕೆ ನನಗೆ ಲಿಖಿತ ಉತ್ತರ ಬಂದಿಲ್ಲ.

ಅಧ್ಯಕ್ಷರು.—ತಾವು ಓದದಿದ್ದರೆ ಬಂದ್ ಮಾಡಿ ಎಂದು ಹೇಳಬೇಕಾಗುತ್ತದೆ.

SRI S. BANGARAPPA.—The subject matter will become the property of this August House, if it is read. If he does not get reply, why should he read. ಇದೇ ಸಬ್ಜೆಕ್ಟ್ ಬಗ್ಗೆ ಹಿಂದಿನ ಸದನದಲ್ಲಿ ನಿಯಮ ೩೩ಳರ ಕೆಳಗೆ ಅವರು ಕೇಳಿದರು. ಮತ್ತೇ ಇದನ್ನು ಓದಿದರೆ ಇದರ ಗತಿಯೂ ಅದೇ ಆಗುತ್ತದೆ. So Hon. Member Mr. Neelakantappa is cent percent correct. ಹಿಂದೆ ಅವರು ಓದಿದ ೩೩ಳರ ಗತಿ ಏನಾಯಿತು ?

ಅಧ್ಯಕ್ಷರು.—ತಾವು ಓದುತ್ತಿರೋ ಇಲ್ಲವೋ ?

ಶ್ರೀ ಬಿ. ಆರ್. ನೀಲಕಂಠಪ್ಪ.—ನಾನು ಓದುತ್ತೇನೆ ಸ್ವಾಮಿ. ಹಿಂದೆ ಓದಿದ...

ಅಧ್ಯಕ್ಷರು.—ತಾವು ಓದಿ.

(III) ತರೀಕೆರೆ ತಾಲ್ಲೂಕು ಕೈಗಾರಿಕೆಯಲ್ಲಿ ಹಿಂದುಳಿದಿರುವ ಬಗ್ಗೆ

ಶ್ರೀ ಬಿ. ಆರ್. ನೀಲಕಂಠಪ್ಪ.—ತರೀಕೆರೆ ತಾಲ್ಲೂಕು ಇಡೀ ರಾಜ್ಯದಲ್ಲೇ ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕು ಆಗಿದೆ. ತರೀಕೆರೆಯಲ್ಲಿ ಸರಕಾರದ ಪತಿಯಿಂದ ಯಾವ ಕೈಗಾರಿಕೆಯೂ ಪ್ರಾರಂಭವಾಗಿಲ್ಲ. ದಿನೇ ದಿನೇ ಅಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಮತ್ತು ಸಣ್ಣ ಕೈಗಾರಿಕೆಯಲ್ಲೂ ಸಹಾ ಸರಕಾರದ ಯಾವ ಪ್ರೋತ್ಸಾಹವೂ ದೊರೆತಿಲ್ಲ. ಸಣ್ಣ ಕೈಗಾರಿಕೆಯನ್ನು ಸ್ಥಾಪಿಸಲು ಸ್ಥಳವನ್ನು ಸಹಾ ಸ್ವಾಧೀನಪಡಿಸಿಕೊಂಡಿಲ್ಲ ಜಮೀನನ್ನು ಸಹ ತೆಗೆದುಕೊಳ್ಳಲು ಇದರ ಬಗ್ಗೆ ಗಮನ ಪನ್ನೂ ಸಹ ತಾವು ಹರಿಸಿರುವುದಿಲ್ಲ. ಆದ್ದರಿಂದ ದಯಮಾಡಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕಾ ಷೆಡ್ಡುಗಳನ್ನು ಹಾಗೂ ಸ್ಥಳವನ್ನು ಸಹ ಮಾಡಬೇಕಾಗಿಯೂ ಮತ್ತು ತಾವು ತಾಂತ್ರಿಕ ಸಹಕಾರ ಮತ್ತು ಸಣ್ಣ ಕೈಗಾರಿಕೆಯ ತರಬೇತಿಗೆ ಸೂಕ್ತ ಅವಕಾಶ ಕಲ್ಪಿಸಿಕೊಡುವಿರಾ ? ಯಾವಾಗ ಯಾವ ಯಾವ ಕ್ರಮ ತೆಗೆದುಕೊಳ್ಳುವಿರಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನೀಲಕಂಠಪ್ಪನವರೇ, ಇದೇ ವಿಷಯವನ್ನು ತಾವು ಮುಂದಿನ ಅಧಿವೇಶನದಲ್ಲೂ ಎತ್ತಬೇಕಾಗುತ್ತದೆ.

೧೦-೩೦ ಎ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಅಭಿಪ್ರಾಯವು ಗೊತ್ತಾಗಿದೆ ಸಂಬಂಧಪಟ್ಟ ಮಂತ್ರಿಯವರಿಂದ ಅವರಿಗೆ ಉತ್ತರ ಒದಗಿಸಿಕೊಡುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಏನಾಯಿತು.

ಅಧ್ಯಕ್ಷರು.—ತಾವು ಕೂಡಿ ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

(ಅಧ್ಯಕ್ಷರ ಅಪ್ಪಣೆಯ ಮೇರೆಗೆ ರೆಕಾರ್ಡ್ ಮಾಡಿಲ್ಲ.)

ಶ್ರೀ ಗೋಪಾಲ ಮುಕುಂದ ಕಾನಡೆ.—ಪ್ರತಿಯೊಬ್ಬರಿಗೂ ಆದೇ ಕತೆ ಆದರೆ ಪ್ರಶ್ನೆ ಏಕೆ ಹಾಕ ಬೇಕು?

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್.

(ಅಧ್ಯಕ್ಷರ ಅಪ್ಪಣೆಯ ಮೇರೆಗೆ ರೆಕಾರ್ಡ್ ಮಾಡಿಲ್ಲ.)

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಪದೇ ಪದೇ ಎದ್ದು ನಿಂತು ಮಾತನಾಡಿದರೆ ಹೇಗೆ ?

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್.

(Not recorded as ordered by the Chair.)

ಅಧ್ಯಕ್ಷರು.—ಈಗಾಗಲೇ ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಹೇಳಿದ್ದಾರೆ, ನೀವು ಹೇಳಿದ ಸಲಹೆ ಯೋಗ್ಯವಿದೆಯೆಂದು ನಾನೂ ಒಪ್ಪಿದ್ದೇನೆ. ಮಾನ್ಯ ಮಂತ್ರಿಗಳೂ ಒಪ್ಪಿದ್ದಾರೆ. ಸೋಮವಾರ ಎಲ್ಲಾ ಮಂತ್ರಿಗಳು ಇಲ್ಲಿ ಇರಲಿಕ್ಕೆ ವ್ಯವಸ್ಥೆ ಮಾಡುತ್ತೇನೆಂದು ನಾನು ನಿಮಗೆ ಅಷ್ಯೂರೆನ್ಸ್ ಕೊಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಹೇಳುತ್ತೇನೆ ಎಲ್ಲಾ ಮಂತ್ರಿಗಳಿಗೂ ಸೋಮವಾರದಿಂದ ಹಾಜರಾಗಲಿಕ್ಕೆ ಹೇಳಿ ಎಂದು ನಾನು ಹೇಳಿದ್ದೇನೆ ಈಗ ವಿಧಾನ ಪರಿಷತ್ತು ಇಲ್ಲ, ಅವರು ಅಲ್ಲಿ ಹೋಗಿದ್ದಾರೆಂದು ಹೇಳಲಿಕ್ಕೆ. ಅವರ ಪರವಾಗಿ ಸಂಸದೀಯ ವ್ಯವಹಾರ ಮಂತ್ರಿಗಳು ಹೇಳಿದ್ದಾರೆ, ನಾನೂ ಹೇಳಿದ್ದೇನೆ. ತಾವು ಕುಳಿತುಕೊಳ್ಳಿ, ಸೋಮವಾರ ದಿಂದ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸೋಮವಾರದಿಂದ ವಿಧಾನಪರಿಷತ್ತು ಪ್ರಾರಂಭವಾಗುತ್ತದೆ. ಅದೊಂದು ಕಾರಣ ಅವರಿಗೆ ಸಿಗುತ್ತದೆ.

(ಗೊಂದಲ)

ಅಧ್ಯಕ್ಷರು.—ಸೋಮವಾರ ವಿಧಾನ ಪರಿಷತ್ತು ಪ್ರಾರಂಭವಾಯಿತೆಂದರೆ ಅವರು ಅಲ್ಲಿ ಇಪ್ಪರೆ ಅವರ ಪರವಾಗಿ ಇವರು ಉತ್ತರ ಹೇಳುತ್ತಾರೆ. ಕೆಲಸವಿಲ್ಲದ್ದಿದ್ದರೆ ಇಲ್ಲಿ ಇರುವುದಕ್ಕೆ ಹೇಳುತ್ತೇನೆ. ಅವರು ಅಲ್ಲಿ ಇಲ್ಲವೇ ಇಲ್ಲಿ ಇರಬೇಕು.

(ಗೊಂದಲ)

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಸದನಕ್ಕೆ ಅವರು ಏಕೆ ಬರುತ್ತಿಲ್ಲ. ? ಅವರು ಬರ ಬೇಕು ಅದು ಅವರ ಕರ್ತವ್ಯವಲ್ಲವೇ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ನೀಲಕಂಠಪ್ಪನವರು ಹೋದ ಸದನದಲ್ಲಿ ಪ್ರಶ್ನೆ ಕೇಳಿದರು ಆಗ ಉತ್ತರ ಕೊಟ್ಟಿಲ್ಲ. ಇದು ರಿಪೀಟ್ ಆಗುತ್ತಿದೆ. ಅವರು ಕೇಳಿದ್ದು ತರೀಕೆರೆ ಇಂಡಸ್ಟ್ರಿಯಲ್ ಎಸ್ಟೇಟ್ ಬಗ್ಗೆ. ಸಮರ್ಪಕವಾದ, ಸಮಂಜಸವಾದ ಉತ್ತರವನ್ನು ಒದಗಿಸು ತ್ತೇನೆಂದು ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳುತ್ತಾರೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಬಹುತೇಕ ಮಂತ್ರಿಗಳು ಬಂದಿದ್ದೇವೆ. ೨-೩ ಮಂತ್ರಿಗಳು ಬಂದಿಲ್ಲ. ಸೋಮವಾರ ದಿವಸ ಆದಷ್ಟೂ ಹಾಜರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ೩೩ಳಿ ನೋಟೀಸ್ ನಮಗೆ ಹಿಂದಿನ ದಿವಸ ತಲುಪುವ ಹಾಗೆ ತಾವು ವ್ಯವಸ್ಥೆ ಮಾಡಬೇಕು ಇದರಿಂದಾಗಿ ನಮಗೆ ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ,

ಶ್ರೀ ಎಸ್. ಬಂಗಾರಪ್ಪ.—ಬಹುಪಾಲು ಮಂತ್ರಿಗಳು ಇದ್ದಾರೆಂದು ಹೇಳಿದ್ದಾರೆ. ''ಕರಾಣ ಅಂಗಡಿಗೆ ಹೋಗಿ ಹೆಸರುಕಾಳು ಕೇಳಿದ್ದಕ್ಕೆ ಬೆಲ್ಲ ಬಹಳ ಚೆನ್ನಾಗಿದೆ ತೆಗೆದುಕೊಂಡು ಹೋಗಿ ಎಂದು ಹೇಳಿದರಂತೆ'' ಬೇರೆ ಮಂತ್ರಿಗಳು ಇದ್ದಾರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಮತ್ತೊಂದು ವಿಚಾರ. ''ತೊಗರಿ ಬೇಳೆ ಕೇಳಿದ್ದಕ್ಕೆ ಕಾಫಿಪುಡಿ ಚೆನ್ನಾಗಿದೆ ತೆಗೆದುಕೊಂಡು ಹೋಗಿ'' ಎಂದು ಹೇಳಿದಂತೆ ಆಗಿದೆ ಆದನ್ನು ತಾವು ಒಪ್ಪುತ್ತೀರಾ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಪಶು ಸಂಗೋಪನಾ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಮೊನ್ನೆ ೩೩ಳಿನಲ್ಲಿ ಪ್ರಶ್ನೆ ಕೇಳಿದ್ದೆ, ಉತ್ತರ ಕೊಡುತ್ತೇನೆಂದು ಹೇಳಿದ್ದರು, ಉತ್ತರ ರೆಡಿ ಇದ್ದರೆ ಕೊಡುವುದಕ್ಕೆ ಹೇಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಕಳುಹಿಸಿದ್ದೇನೆ.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ.—ಅಲ್ಲಿ ಮಿನುಗಾರರು ಬಹಳ ಸಂಕಷ್ಟದಲ್ಲಿದ್ದಾರೆ. ಅದಕ್ಕೆ ಉತ್ತರ ಬರಲಿಲ್ಲ. ಇದು ಬಹಳ ಭಯಂಕರವಾದ ಮುಖ್ಯವಾದ ವಿಚಾರವಾಗಿದೆ.

IV ಪಿ.ಯು.ಸಿ. ಪರೀಕ್ಷೆಯ ಫಲಿತಾಂಶದ ಬಗ್ಗೆ

ಶ್ರೀ ಕಲ್ಯಾಣರಾವ್ ಸಂಗಪ್ಪ ಮೊಳಕೇರಿ.—ಮಾನ್ಯ ಅಧ್ಯಕ್ಷರೇ, ಪಿ.ಯು.ಸಿ. ಬೋರ್ಡ್‌ನಿಂದ ಈ ವರ್ಷ ೧೯೮೫-೮೬ರ ಪಿ.ಯು.ಸಿ. ೨ನೇ ವರ್ಷದ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶ ತಿಳಿಸದಿದ್ದರಿಂದ ಕೆಲವು ವಿದ್ಯಾರ್ಥಿಗಳಿಗೆ ಮುಂದಿನ ಅಭ್ಯಾಸಕ್ಕೆ ತಡೆಯುಂಟಾಗಿದೆ. ಈ ವಿಳಂಬವು ಸಾರ್ವತ್ರಿಕವಾಗಿರುವುದು. ಈ ವಿಳಂಬದಿಂದ ದಾರಿ ತೋರದಂತಾಗಿರುವ ವಿದ್ಯಾರ್ಥಿಗಳ ಬಗ್ಗೆ ಸರಕಾರ ಹೊಣೆ ಹೊತ್ತು ವಿದ್ಯಾರ್ಥಿಗಳ ಫಲಿತಾಂಶವನ್ನು ತಕ್ಷಣ ಪ್ರಕಟಿಸಿ ಅಪರ ಈ ವರ್ಷದ ಮುಂದಿನ ಅಭ್ಯಾಸ ಮಾಡುವಂತೆ ಸಹಾಯ ಮಾಡಬೇಕು ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಮಂತ್ರಿಗಳು).—ಮಾನ್ಯ ಸದಸ್ಯರು ಹೇಳಿದ ಎಲ್ಲಾ ವಿಷಯವನ್ನು ಒಪ್ಪುತ್ತೇನೆ. ತಡವಾಗಿದೆ ನಿಜ. ಈಗಾಗಲೇ ಅವರಿಗೆ ಮುಂದಿನ ಪ್ರವೇಶಕ್ಕೆ ಸೇರುವುದಕ್ಕೆ ದಿನಾಂಕ ೨೩ರ ತನಕ ಸಮಯ ಕೊಟ್ಟಿದ್ದೇನೆ. ಈಗಾಗಲೇ ಬಹಳ ಜನ ಸೇರಿದ್ದಾರೆ.

ಶ್ರೀ ಕಲ್ಯಾಣರಾವ್ ಸಂಗಪ್ಪ ಮೊಳಕೇರಿ.—ಇನ್ನೂ ಫಲಿತಾಂಶ ಪ್ರಕಟಣೆಯಾಗಿಲ್ಲ.

ಶ್ರೀ ಜೆ.ಎಸ್. ಆಚಾರ್
(ಮಾನ್ಯ ಸದಸ್ಯರು ಗೈರುಹಾಜರು)
ಶ್ರೀ ಆರ್. ರಾಮಯ್ಯ
(ಮಾನ್ಯ ಸದಸ್ಯರು ಗೈರು ಹಾಜರು)

V ನಾಡಕಚೇರಿಗೆ ಹೆಚ್ಚು ಅಧಿಕಾರ ಕೊಡುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದಾದ್ಯಂತ ೧೭೫ ನಾಡ ಆಫೀಸ್‌ಗಳನ್ನು ತೆರೆದಿದ್ದು ಅಲ್ಲಿದ್ದ ಆರ್.ಐ. ರವರನ್ನು ತೆಗೆದಿದ್ದೀರಿ. ಆದರಿಂದ ಸರಕಾರದ ಕೆಲಸ ನಾಡ ಆಫೀಸ್‌ನಲ್ಲಿ ಸುಗಮವಾಗಿ ಜರಗುವುದಿಲ್ಲ. ತಾಲ್ಲೂಕು ಆಫೀಸಿನಲ್ಲಿನ ಕೆಲವು ಕೆಲಸಗಳನ್ನು ಮಾತ್ರ ನಾಡ ಆಫೀಸಿಗೆ ಬದಲಾಯಿಸಿದ್ದೀರಿ, ಪೂರ್ತಿ ಅಧಿಕಾರವನ್ನು ಕೊಟ್ಟಿಲ್ಲ. ಇದರಿಂದ ಅನ್ಯಾಯವಾಗುತ್ತಿದೆ. ನಾಡ